**ಸಾಕ್ಷಿ ಯನ್ನು ದಿನಾಂಕ: 05-03-2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು :- 2 ನೇ ಪ್ರತಿವಾದಿ ಪರ ವಕೀಲರಿಂದಃ**

ನಾನು ದೇವನಹಳ್ಳಿ ಸುತ್ತಮುತ್ತಲೂ ಕೆಲವು ಆಸ್ತಿಗಳನ್ನು ಖರೀದಿಸಿದ್ದು, ಎಷ್ಟು ಆಸ್ತಿಗಳು ಎಂದು ನನಗೆ ಈಗ ಹೇಳಲು ನೆನಪಿಲ್ಲ. ನಾನು ಲೆಕ್ಕವಿಲ್ಲದಷ್ಟು ಆಸ್ತಿಗಳನ್ನು ಖರೀದಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಖರೀದಿಸಿದ ಸ್ವತ್ತುಗಳ ಬಗ್ಗೆ ಮಧ್ಯವರ್ತಿಗಳು ಬಂದು ಖರೀದಿಯ ಬಗ್ಗೆ ಮಾತುಕತೆ ನಡೆಸುತ್ತಿದ್ದರು ಎಂದರೆ ಸರಿಯಲ್ಲ. ರೈತರು ಬರುತ್ತಿದ್ದರು ಎಂದು ನುಡಿಯುತ್ತೇನೆ. ನಮ್ಮ ಕಛೇರಿಯು ಬೆಂಗಳೂರಿನಲ್ಲಿದ್ದು, ದೇವನಹಳ್ಳಿಯಲ್ಲಿ ಯಾವುದೇ ಶಾಖೆ ಇರುವುದಿಲ್ಲ. ನನಗೆ ಕನ್ನಡ ಭಾಷೆ ಅರ್ಥ ಆಗುತ್ತದೆ. ನನಗೆ ಕನ್ನಡದ ಕೆಲವು ಶಬ್ಧಗಳು ಅರ್ಥವಾಗುವುದಿಲ್ಲ ಎಂದು ನುಡಿಯುತ್ತೇನೆ. ನನಗೆ ಇಂಗ್ಲೀಷ ಭಾಷೆಯಲ್ಲಿ ಪ್ರಶ್ನೆ ಕೇಳಿದರೆ ಸರಿಯಾಗಿ ಅರ್ಥ ಆಗುತ್ತದೆ ಎಂದು ನುಡಿಯುತ್ತೇನೆ.

(ಈ ಹಂತದಲ್ಲಿ ನ್ಯಾಯಾಲಯದ ಸಮಯ ವ್ಯಯ ಆಗುತ್ತಿರುವುದನ್ನು ಗಮನಿಸಿ 5 ನೇ ಪ್ರತಿವಾದಿ ಪರ ವಕೀಲರಿಗೆ ಮುಂದಿನ ದಿನಾಂಕದಂದು ಭಾಷಾಂತರಕಾರರನ್ನು ನೇಮಕ ಮಾಡಿಕೊಳ್ಳುವಂತೆ ನಿರ್ದೇಶಿಸಿ ಪ್ರಕರಣವನ್ನು ಮುಂದೂಡಲಾಯಿತು).

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿರುತ್ತಾರೆ,**

**ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ದೇವನಹಳ್ಳಿ.**